# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 688 |
| ಉತ್ತರಿಸಬೇಕಾದ ದಿನಾಂಕ | : | 12.07.2023 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ವಿವಿಧ ವಸತಿ ಯೋಜನೆಯಡಿ NOT OK ಸ್ಥಿತಿಯಿಂದ ಅನುದಾನ ಬಿಡುಗಡೆಯಾದ ಪ್ರಕರಣಗಳೆಷ್ಟು;<br>(ವಿವರ ನೀಡುವುದು)</td><td>ವಸತಿ ಯೋಜನೆಗಳಡಿ ಮನೆ ನಿರ್ಮಾಣದ ಹಂತವಾರು ಜಿ.ಪಿ.ಎಸ್ ಛಾಯಾ ಚಿತ್ರಗಳನ್ನು ರಾಜೀವ್ ಗಾಂಧಿ ವಸತಿ ನಿಗಮದ ಹಂತದಲ್ಲಿ ಆಡಿಟ್ ಪರಿಶೀಲನೆಯನ್ನು ನಡೆಸಿ ನಿಯಮಾನುಸಾರ ಮನೆ ನಿರ್ಮಾಣವಾಗಿದ್ದಲ್ಲಿ "OK" ಎಂದು ಒಂದು ವೇಳೆ ನಿಯಮಬಾಹಿರವಾಗಿದ್ದಲ್ಲಿ "NOT OK" ಎಂದು ಅನುದಾನವನ್ನು ತಡೆಹಿಡಿಯಲಾಗಿರುತ್ತದೆ.<br><br>ಈ ಮನೆಗಳಿಗೆ ಸಂಬಂಧಪಟ್ಟಂತೆ ಒಂದು ವೇಳೆ ವಾಸ್ತವಿಕವಾಗಿ ನಿರ್ಮಾಣಗೊಂಡಿರುವ ಮನೆಯು ಅರ್ಹವಿರುವುದು ಕಂಡುಬಂದಲ್ಲಿ, ಸ್ಥಳೀಯ ಸಂಸ್ಥೆ / ತಾಲ್ಲೂಕು ಮಟ್ಟದ ಅಧಿಕಾರಿಗಳ ದೃಢೀಕರಣದೊಂದಿಗೆ, ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ಜಿಲ್ಲಾಡಳಿತವು ಆನ್‌ಲೈನ್ ಮೂಲಕ ನಿಗಮಕ್ಕೆ ಸಲ್ಲಿಸಿದಲ್ಲಿ, ಪರಿಶೀಲಿಸಿ, ಅರ್ಹರಿದ್ದಲ್ಲಿ ಅನುದಾನ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತಿದೆ.<br><br>ಹೀಗೆ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ NOT OK ಆಗಿ ಜಿಲ್ಲಾಡಳಿತದಿಂದ ಆನ್‌ಲೈನ್ ಮೂಲಕ ಪ್ರಸ್ತಾವನೆ ಸಲ್ಲಿಕೆಯಾಗಿ OK ಆದ ಮನೆಗಳ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.<br><br><table><tr><th>ಜಿಲ್ಲೆ</th><th>NOT OK ಸ್ಥಿತಿಯಿಂದ OK ಆದ ಮನೆಗಳ ಸಂಖ್ಯೆ</th></tr><tr><td>ಕಲಬುರಗಿ</td><td>514</td></tr><tr><td>ಯಾದಗಿರಿ</td><td>543</td></tr><tr><td>ಒಟ್ಟು</td><td>1057</td></tr></table></td></tr>
<tr><td>ಆ)</td><td>ಕೆಲವೊಮ್ಮೆ ತಳಪಾಯ ಹಂತವನ್ನು OK ಮಾಡಿ ಮುಂದಿನ ಹಂತದಲ್ಲಿ NOT OK ಕಾರಣ ನೀಡಿ ಅನುದಾನ ತಡಿಹಿಡಿದಿರುವ ಪ್ರಕರಣಗಳು ಎಷ್ಟು; ಅನುದಾನ ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;<br>(ವಿವರ ನೀಡುವುದು)</td><td>ತಳಪಾಯ ಹಂತವನ್ನು OK ಮಾಡಿ ಮುಂದಿನ ಹಂತದಲ್ಲಿ NOT OK ಎಂದು ವಿವಿಧ ಕಾರಣಗಳಿಂದ 2,726 ಫಲಾನುಭವಿಗಳ ಮನೆಗಳ ಅನುದಾನವನ್ನು ತಡೆಹಿಡಿಯಲಾಗಿರುತ್ತದೆ. ಜಿಲ್ಲಾವಾರು ವಿವರ ಈ ಕೆಳಗಿನಂತಿದೆ:<br><br><table><tr><th>ಜಿಲ್ಲೆ</th><th>NOT OK ಆಗಿ ಅನುದಾನ ತಡೆಹಿಡಿಯಲಾದ ಮನೆಗಳ ಸಂಖ್ಯೆ</th></tr><tr><td>ಕಲಬುರಗಿ</td><td>2021</td></tr><tr><td>ಯಾದಗಿರಿ</td><td>705</td></tr><tr><td>ಒಟ್ಟು</td><td>2726</td></tr></table><br>ಈ ಮನೆಗಳಿಗೆ ಸಂಬಂಧಪಟ್ಟಂತೆ, ವಾಸ್ತವಿಕವಾಗಿ ನಿರ್ಮಾಣಗೊಂಡಿರುವ ಮನೆಯು ಅರ್ಹವಿರುವುದು ಕಂಡುಬಂದಲ್ಲಿ, ಸ್ಥಳೀಯ ಸಂಸ್ಥೆ / ತಾಲ್ಲೂಕು ಮಟ್ಟದ ಅಧಿಕಾರಿಗಳ ದೃಢೀಕರಣದೊಂದಿಗೆ, ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ಜಿಲ್ಲಾಡಳಿತವು ಆನ್‌ಲೈನ್ ಮೂಲಕ ನಿಗಮಕ್ಕೆ ಸಲ್ಲಿಸಿದಲ್ಲಿ, ಪರಿಶೀಲಿಸಿ, ಅರ್ಹರಿದ್ದಲ್ಲಿ ಅನುದಾನ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತಿದೆ.</td></tr>
</table>